**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.38/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಜೀವಪ್ಪ ನೆಲೋಗಲ್ | ಸಿಡಬ್ಲ್ಯೂ | 1 |
| ತಂದೆ ಹೆಸರು | ಗೋವಿಂದಪ್ಪ | ಪಿಡಬ್ಲ್ಯೂ | 1 |
| ವಯಸ್ಸು | 50 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ಚಿಕ್ಕಹುಲ್ಲಾಳ | | |

**ದಿಃ 31.07.2024 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

**1).** ಮೃತ ಉಡಚ್ಚಪ್ಪ ಮತ್ತು ಸುರೇಶ ಗೊತ್ತು. ಅವರು ವಾಲೀಕಾರಿಕೆ ಕೆಲಸ ಮಾಡುತ್ತಿದ್ದರು. ದಿನಾಂಕಃ 17.11.2020 ಉಡಚಪ್ಪ ಮತ್ತು ಸುರೇಶ ಹಾವೇರಿಯ ಡಿ.ಸಿ.ಆಪೀಸಗೆ ಕೆಲಸಕ್ಕೆ ಹೋಗಿದ್ದರು. ಹಾನಗಲ್ ಹಾವೇರಿ ರಸ್ತೆಯಲ್ಲಿ ಪೆಟ್ರೋಲ್ ಬಂಕನಿಂದ ಕುಳೇನೂರ ಕ್ರಾಸ ಹತ್ತಿರ ಕಾರು ಮತ್ತು ದ್ವಿಚಕ್ರ ವಾಹನ ನಡುವೆ ಅಪಘಾತ ಆಗಿದೆ ಎಂದು ಚಾ.ಸಾ-12 ಶಿವಪ್ಪರವರು ನನಗೆ ಪೋನ ಮಾಡಿ ಹೇಳಿದರು. ಅಲ್ಲಿಗೆ ಹೋಗಿ ನೋಡಿದಾಗ ಅಪಘಾತ ಆಗಿ ಕಾರು ರಸ್ತೆಯಿಂದ ಹೊಲದಲ್ಲಿ ಬಿದ್ದಿತ್ತು. ದ್ವಿಚಕ್ರ ವಾಹನ ರಸ್ತೆಯಲ್ಲಿ ಬಿದ್ದಿತ್ತು. ಸುರೇಶ ಮತ್ತು ಉಡಚಪ್ಪರವರಿಗೆ ಮೂಳೆಮುರಿತಗಳಾಗಿ ರಸ್ತೆಯಲ್ಲಿ ಬಿದಿದ್ದರು. ನಂತರ ಅವರನ್ನು ಹಾವೇರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಕಾರಿನ ಚಾಲಕ ಸ್ಥಳದಲ್ಲಿ ಇರಲಿಲ್ಲ, ಆತನ ಹೆಸರು ನಿಂಗನಗೌಡ ಪಾಟೀಲ ಎಂದು ಅಲ್ಲಿ ಇದ್ದವರು ಹೇಳಿದರು. ನಂತರ ಅದೇ ದಿನ ರಾತ್ರಿ 8-00 ರಿಂದ 9-00 ಘಂಟೆಯಲ್ಲಿ ಪೊಲೀಸ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ಗಾಯಾಳುಗಳನ್ನು ಹುಬ್ಬಳ್ಳಿಯ ಆಸ್ಪತ್ರೆಗೆ ಕಳುಹಿಸಿದ್ದರು. ದೂರನ್ನು ಗುರುತಿಸಿದ್ದು, ಅದನ್ನು ನಿ.ಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-10(ಎ) ಎಂದು ಗುರುತಿಸಲಾಯಿತು.

**2)** ಮಾರನೇ ದಿನ ಅಪಘಾತವಾದ ಸ್ಥಳಕ್ಕೆ ನನ್ನನ್ನು ಮತ್ತು ನಮ್ಮ ಗ್ರಾಮದವರನ್ನು ಪಂಚರನ್ನಾಗಿ ಚಾ.ಸಾ-6 ಮತ್ತು 7 ರವರನ್ನು ಕರೆಸಿದ್ದರು. ಸ್ಥಳವನ್ನು ನಾನೇ ತೋರಿಸಿದ್ದೇನೆ. ಪೊಲೀಸರು ಪಂಚನಾಮೆ ಮಾಡಿ, ಕಚ್ಚಾ ನಕಾಶೆ ಬರೆದು, ಪೋಟೋಗಳನ್ನು ತೆಗೆದಿದ್ದಾರೆ. ಸ್ಥಳ ಪಂಚನಾಮೆಯನ್ನು ನಿ.ಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-11(ಎ) ಎಂದು, ಕಚ್ಚಾ ನಕಾಶೆಯನ್ನು ನಿ.ಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-12(ಎ) ಎಂದು ಗುರುತಿಸಲಾಯಿತು. ಮೂರು ಪೋಟೋಗಳನ್ನು ಗುರುತಿಸಿದ್ದು, ಪೋಟೋಗಳನ್ನು ನಿ.ಪಿ-13 ರಿಂದ ನಿ.ಪಿ-15 ಎಂದು ಗುರುತಿಸಲಾಯಿತು.

**3)** ನಂತರ ನನ್ನನ್ನು ಪೊಲೀಸ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ದ್ವಿಚಕ್ರ ವಾಹನ ಮತ್ತು ಕಾರು ಇತ್ತು. ಅವುಗಳನ್ನು ಜಪ್ತು ಮಾಡಿಕೊಂಡು ಪಂಚನಾಮೆ ಬರೆದು, ಪೋಟೋಗಳನ್ನು ತೆಗೆದಿದ್ದಾರೆ. ಜಪ್ತು ಪಂಚನಾಮೆಯನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ಪೋಟೋಗಳನ್ನು ಈಗಾಗಲೇ ನಿ.ಪಿ-5 ರಿಂದ ನಿ.ಪಿ-8 ಎಂದು ಗುರುತಿಸಲ್ಪಟ್ಟಿದೆ. ಗಾಯಾಳುಗಳು ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ತಿಳಿಯಿತು. ಈ ಬಗ್ಗೆ ಪೊಲೀಸರ ಮುಂದೆ ಮರುಹೇಳಿಕೆಯನ್ನು ನೀಡಿದ್ದೇನೆ. ಪೋಟೋಗಳಲ್ಲಿನ ದ್ವಿಚಕ್ರ ವಾಹನ ಮತ್ತು ಕಾರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಹಾಜರು, ವಕೀಲರು ಗೈರು ಹಾಜರು. ಪಾಟೀ ಸವಾಲಿಗೆ ಯಾವುದೇ ಕೋರಿಕೆ ಇರುವದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.